ಅಧ್ಯಯನಕ್ಕೆ ತಜ್ಞರ ಸಮಿತಿ ರಚನೆ | ಸಚಿವ ಬಿ.ಸಿ.ಪಾಟೀಲ್ ಅಧ್ಯಕ್ಷತೆಯಲ್ಲಿ ಸಭೆ

ಕೃಷಿ ರಪ್ತು ವಲಯ ಸ್ಥಾಪನೆಗೆ 11 ಜಿಲ್ಲೆಗಳ ಗುರುತು

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ರೈತರ ಆದಾಯ ದ್ವಿಗುಣ ಸೇರಿ ವಿವಿಧ ಉದ್ದೇಶದಿಂದ ಕೃಷಿ ರಪ್ತು ಕೇಂದ್ರಗಳನ್ನು ಸ್ಥಾಪನೆ ಮಾಡಲು ಹನ್ನೊಂದು ಜಿಲ್ಲೆಗಳನ್ನು ಗುರುತಿಸಲಾಗಿದೆ. ಕೃಷಿ ಸಚಿವ ಬಿ.ಸಿ.ಪಾಟೀಲ್ ಅಧ್ಯಕ್ಷತೆಯಲ್ಲಿ ಬುಧವಾರ ನಡೆದ ಸಭೆಯಲ್ಲಿ ಕೃಷಿ ಉತ್ಪನ್ನಗಳ ರಪ್ತು ಹೆಚ್ಚಳಕ್ಕೆ ಸಂಬಂಧಿಸಿದಂತೆ ರಾಜ್ಯದಲ್ಲಿ ಕೈಗೊಳ್ಳಬೇಕಾದ ಮೂಲಸೌಕರ್ಯಗಳ ಕುರಿತು ಸುದೀರ್ಘವಾಗಿ ಚರ್ಚೆ ನಡೆಸಲಾಯಿತು.

ರಾಜ್ಯದ ಕೃಷಿ ಇಲಾಖೆ ಅಧಿಕಾರಿಗಳು, ಕಫೆಕ್ ವ್ಯವಸ್ಥಾಪಕ ನಿರ್ದೇಶಕರು, ಅಪೆಡಾದ ಅಧಿಕಾರಿಗಳು ಸಭೆಯಲ್ಲಿ ಪಾಲ್ಗೊಂಡು ರಾಜ್ಯದಿಂದ ಕೃಷಿ ಹಾಗೂ ತೋಟಗಾರಿಕೆ ಉತ್ಪನ್ನಗಳ ರಪ್ತು ಹೆಚ್ಚಳದ ಸಾಧಕ-ಬಾಧಕಗಳ ಬಗ್ಗೆ ಸಮಾಲೋಚನೆ ನಡೆಸಿದರು. ಬಜೆಟ್‌ನಲ್ಲಿ ಘೋಷಣೆ ಮಾಡಿರುವ ಜಿಲ್ಲೆಗೊಂದು ಮಿನಿ ಪುಡ್ ಪಾರ್ಕ್ ಸ್ಥಾಪನೆಯನ್ನು ಕೃಷಿ ಉತ್ಪನ್ನಗಳ ರಪ್ತಿಗೆ ಪೂರಕವಾಗಿ ಬಳಸಿಕೊಳ್ಳುವುದು ಸೇರಿ ವಿವಿಧ ವಿಷಯಗಳ ಚರ್ಚೆ ನಡೆಯಿತು. ಕೃಷಿ ಇಲಾಖೆ ಹಾಗೂ ಕೃಷಿ ವಿಶ್ವವಿದ್ಯಾಲಯಗಳ ಜಮೀನನ್ನು ಬಳಸಿಕೊಂಡು ರಪ್ತು ಮೂಲಸೌಕರ್ಯ ಅಭಿವೃದ್ಧಿಪಡಿಸಬೇಕೆಂದು ನಿರ್ಧರಿಸಲಾಯಿತು.



ಯಾವ ಜಿಲ್ಲೆ: ಹಾವೇರಿಯ ಹನುಮನಹಟ್ಟಿ, ಬೆಳಗಾವಿಯ ಸವದತ್ತಿ, ಬೀದರ್ ಜಿಲ್ಲೆಯ ಹುಮ್ನಾಬಾದ್, ಮೈಸೂರು, ಶಿವಮೊಗ್ಗ, ಕೊಪ್ಪಳ ಅಥವಾ ಹೊಸಪೇಟೆ, ಉಡುಪಿಯ ಕುಂದಾಪುರ, ವಿಜಯಪುರ ಜಿಲ್ಲೆಯ ಇಂಡಿ, ಉತ್ತರ ಕನ್ನಡ ಜಿಲ್ಲೆಯ ಬನವಾಸಿ, ಬೆಂಗಳೂರಿನ ವೈಟ್‌ಫೀಲ್ಡ್ ನಲ್ಲಿ ಸ್ಥಳ ಗುರುತಿಸಿ ಅಭಿವೃದ್ಧಿಪಡಿಸುವ ಬಗ್ಗೆ ತೀರ್ಮಾನ ಮಾಡಲಾಯಿತು.

ಸಮಿತಿ ರಚನೆ: ರಪ್ತು ವಲಯಗಳ ಸ್ಥಾಪನೆಗೆ ಸಂಬಂಧಿಸಿದಂತೆ ಅಧ್ಯಯನ ನಡೆಸಿ ವರದಿ ನೀಡಲು ವಿವಿಧ ಸಂಸ್ಥೆಗಳ ಹಾಗೂ ಇಲಾಖೆಗಳ ಅಧಿಕಾರಿಗಳ ಸಮಿತಿಯೊಂದನ್ನು ಕಫೆಕ್ ವ್ಯವಸ್ಥಾಪಕ ನಿರ್ದೇಶಕರ ಅಧ್ಯಕ್ಷತೆಯಲ್ಲಿ ರಚನೆ ಮಾಡಲಾಗುತ್ತದೆ. ಕಫೆಕ್‌ನ ಚಂದ್ರಕುಮಾರ್, ಅಪೆಡಾದ ಮಧುಮತಿ, ಕಾರಂತ್, ಗ್ರ್ಯಾಂಟ್ ಥೋಂಟಾನ್‌ನ ಕರುಣ್ ಶರ್ಮ, ಯಾಲಿ ಇನ್ನೋವೆಂಚರ್‌ನ ಮದನ್ ಕುಮಾರ್, ವಿಟಿಪಿಪಿಯ ಪ್ರವೀಣ್ ರಾಮದುರ್ಗ, ಜಂಟಿ ಕೃಷಿ ನಿರ್ದೇಶಕರಾದ ರೂಪಾ ಎ.ಎನ್., ನಬಾರ್ಡ್‌ನ ಅನಿಲ್‌ಕುಮಾರ್ ಸದಸ್ಯರಾಗಿದ್ದಾರೆ. ಈ ಸಮಿತಿಯೂ ಬೆಳೆಯ ಸಾಮರ್ಥ್ಯ, ಜಿಲ್ಲೆಗಳಲ್ಲಿ ರಪ್ತು ಆಧಾರಿತ ಬೆಳೆಗಳನ್ನು ಗುರುತಿಸುವುದು, ರಪ್ತುದಾರರ ಬೇಡಿಕೆ, ಲಭ್ಯವಿರುವ ಸರ್ಕಾರಿ ಜಮೀನು, ರಸ್ತೆ, ರೈಲು, ವಿಮಾನ ಸಂಪರ್ಕ, ಮೂಲಸೌಕರ್ಯಗಳ ಬಗ್ಗೆ ವರದಿ ನೀಡುವಂತೆ ಬಿ.ಸಿ.ಪಾಟೀಲ್ ಸೂಚನೆ ನೀಡಿದರು. ಹಣಕಾಸು ಸಹಾಯಕ್ಕೂ ವಿವರವಾದ ಯೋಜನಾ ವರದಿಯನ್ನು ಸಮಿತಿ ಸಿದ್ಧಪಡಿಸಬೇಕೆಂದು ನಿರ್ದೇಶನ ನೀಡಲಾಯಿತು.

ಕೃಷಿ ಉತ್ಪನ್ನಗಳ ರಪ್ತು ಹೆಚ್ಚಿಸುವ ಉದ್ದೇಶದಿಂದ ಕಫೆಕ್‌ನಲ್ಲಿ ಕೃಷಿ ರಪ್ತು ಮಾರುಕಟ್ಟೆ ಕೋಶವನ್ನು ತಕ್ಷಣ ಸ್ಥಾಪನೆ ಮಾಡಬೇಕೆಂದು ಸಚಿವರು ನಿರ್ದೇಶನ ನೀಡಿದರು. ಈ ಕೋಶವು ರೈತ ಉತ್ಪಾದಕ ಸಂಸ್ಥೆಗಳು, ರಪ್ತುದಾರರು, ಪ್ರಗತಿಪರ ರೈತರು, ನವೋದ್ಯಮಿಗಳಿಗೆ ರಪ್ತಿನ ಬಗ್ಗೆ ಮಾಹಿತಿ ನೀಡಬೇಕಾಗುತ್ತದೆ. ಸದ್ಯದಲ್ಲಿಯೇ ರೈತ ಉತ್ಪಾದಕ ಸಂಸ್ಥೆ ಹಾಗೂ ರಪ್ತುದಾರರ ಸಭೆ ನಡೆಸುವ ಬಗ್ಗೆಯೂ ಸಭೆಯಲ್ಲಿ ಚರ್ಚೆ ನಡೆಸಲಾಯಿತು.



ಕೃಷಿ ರಪ್ತು ಸಾಮರ್ಥ್ಯ ಹೆಚ್ಚು ಮಾಡುವುದಕ್ಕೆ ಸಂಬಂಧಿಸಿದಂತೆ ಸಭೆ ನಡೆಸಲಾಗಿದೆ. ಕೆಲ ವಿಷಯಗಳಲ್ಲೂ ಚರ್ಚೆ ಮಾಡಲಾಗಿದೆ. ಸಮಿತಿ ರಚನೆ ಮಾಡಲಾಗಿದೆ. ಅದು ನೀಡುವ ವರದಿ ಆಧಾರಿಸಿ ಜು.12ರಂದು ಮತ್ತೊಂದು ಸಭೆ ನಡೆಸಲಾಗುತ್ತದೆ.

| ಬಿ.ಸಿ.ಪಾಟೀಲ್ ಕೃಷಿ ಸಚಿವ

30-06-2022 Vv Pg 10

30-06-2022 Eco Times Pg 04

GOVT TO SPEND ₹2,516 CR OVER 5 YEARS

63k Primary Agriculture Credit Societies to be Computerised, Run on Common Platform

Our Political Bureau

New Delhi: The Cabinet Committee on Economic Affairs (CCEA) on Wednesday approved computerisation of 63,000 functional Primary Agricultural Credit Societies (PACS) over 5 years with a total budget outlay of ₹2,516 crore. The Centre's share would be ₹1,528 crore. The PACS constitute the lowest tier of the three-tier short-term cooperative credit (STCC) with 130 million farmers as its members.

The government said the majority of PACS have so far not been computerised and still functioning manually resulting in inefficiency and trust deficit. "In some of the states, standalone and partial computerisation of PACS has been done. There is no uniformity in the software being used by them and they are not interconnected. It has been proposed to computerise all the PACS throughout the country and bring them on a common platform at national level and have a common accounting system for their day-to-day business," the statement added.

The project comprises development of cloud-based software with cyber security and data storage, providing hardware support to the PACS, digitisation of existing records, including maintenance support and training. "This software will be in vernacular language having flexibility of customisation as per the needs of the states. Project Management Units (PMUs) will be set up at central and state levels. District Level Support will also be provided at a cluster of about 200 PACS...," read a statement.



SERVICING 130M FARMERS

PACS are the lowest of the three-tier short-term coop credit system and have 130 m farmers as members

Union Home Minister and Minister of Cooperation, Amit Shah said in a series of tweets said, "Whether it is the creation of the Ministry of Cooperation or decisions taken thereafter in the direction of empowering this sector, they show that PM Modi's 'Sahakar Se Samridhi' is not just a slogan, rather that the PM has an unwavering resolve to bring positive change to lives of those associated with the cooperative sector."

ದೇಶದಲ್ಲಿದೆ 63 ಸಾವಿರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ

ಕೃಷಿ ಸಂಘಗಳ ಕಂಪ್ಯೂಟರೀಕರಣಕ್ಕೆ ರು.2,516 ಕೋಟಿ ಅನುದಾನ

ನವದೆಹಲಿ: ದೇಶದ ಒಟ್ಟು 63 ಸಾವಿರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ (ಪಿಎಸಿಎಸ್) ಕಂಪ್ಯೂಟರೀಕರಣಕ್ಕೆ ಕೇಂದ್ರ ಸರಕಾರ ಮುಂದಾಗಿದೆ. ಇದೆಲ್ಲದಕ್ಕಾಗಿ ಒಟ್ಟು 2,516 ಕೋಟಿ ಅನುದಾನ ಪ್ರಕಟಿಸಿದೆ.

ಪ್ರಧಾನಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಆರ್ಥಿಕ ವ್ಯವಹಾರಗಳ ಸಂಪುಟ ಸಮಿತಿ (ಸಿಸಿಇಎ) ಸಭೆಯಲ್ಲಿ ಬುಧ ವಾರ ಇದಕ್ಕೆ ಅನುಮೋದನೆ ನೀಡಲಾಗಿದೆ. ಕೃಷಿ ಪತ್ತಿನ ಸಹಕಾರ ಸಂಘಗಳ ಕಾರ್ಯದಕ್ಷತೆ ಹೆಚ್ಚಿಸುವ, ಅವುಗಳ ಸೇವೆ ವಿಸ್ತರಿಸುವ, ವ್ಯವಹಾರದಲ್ಲಿ ಪಾರದರ್ಶಕತೆ ಹಾಗೂ ನಿಖರತೆ ತರುವುದು ಕಂಪ್ಯೂಟರೀಕರಣ ಯೋಜನೆಯ ಉದ್ದೇಶವಾಗಿದೆ.

ದತ್ತಾಂಶ ಸಂಗ್ರಹಣೆ: ಕ್ಲೌಡ್ ಆಧಾರಿತವಾಗಿ ರುವ ಏಕರೂಪದ ತಂತ್ರಾಂಶ ಅಭಿವೃದ್ಧಿಪ ಡಿಸುವುದು. ಸೈಬರ್ ಭದ್ರತೆಯ ಜೊತೆಗೆ ದತ್ತಾಂಶ ಸಂಗ್ರಹಣೆಗೆ ಸಹಕಾರ ನೀಡು ವುದು. ಹಳೆಯ ದಾಖಲೆಗಳ ಡಿಜಿಟಲೀಕರಣ ಕ್ಕಾಗಿ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ಅಗತ್ಯವಿರುವ ಹಾರ್ಡ್‌ವೇರ್ ಬೆಂಬಲ ಒದಗಿಸುವುದಕ್ಕೂ ಈ ಯೋಜನೆ ಸಹಕಾರಿ ಯಾಗಲಿದೆ. ಸಾಫ್ಟ್‌ವೇರ್‌ಗಳು ಸ್ಥಳೀಯ ಭಾಷೆ ಒಳಗೊಂಡಿರಲಿವೆ. ಇದರಿಂದ ಗ್ರಾಹಕರ ದಾಖಲೀಕರಣ ಸುಲಭವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಬಹುತೇಕ ಪತ್ತಿನ ಸಹಕಾರ ಸಂಘಗಳು ಇನ್ನೂ ಗಣಕೀಕೃತಗೊಂಡಿಲ್ಲ. ಅವು



ಈಗಲೂ ಹಳೆಯ ಪದ್ಧತಿಯಲ್ಲೇ ವ್ಯವಹರಿಸುತ್ತಿವೆ. ಇದರಿಂದ ಅವುಗಳ ಕಾರ್ಯಕ್ಷಮತೆ ಕುಂಠಿತಗೊಂಡಿವೆ. ಅವುಗಳು ಬಳಸುತ್ತಿರುವ ತಂತ್ರಾಂಶಗಳಲ್ಲೂ ಏಕರೂಪತೆ ಇಲ್ಲ. ಅವು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ (ಡಿಸಿಸಿಬಿ) ಹಾಗೂ ಎಸ್‌ಟಿಸಿಬಿಗಳೊಂದಿಗೂ ಪರಸ್ಪರ ಸಂಪರ್ಕ ಹೊಂದಿಲ್ಲ ಎಂದು ವಿವರಿಸಿದೆ.

ತ್ವರಿತಗತಿಯಲ್ಲಿ ಸಾಲ ಸೌಲಭ್ಯ ಒದಗಿಸುವುದಕ್ಕೆ ಹಾಗೂ ಈ ಪ್ರಕ್ರಿಯೆಗೆ ತಗಲುವ ವೆಚ್ಚ ಕಡಿತಗೊಳಿಸುವುದಕ್ಕೂ ಈ ಯೋಜನೆ ನೆರವಾಗಲಿದೆ. 5 ವರ್ಷಗಳಲ್ಲಿ 63 ಸಾವಿರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳನ್ನು ಕಂಪ್ಯೂಟರೀಕರಣಗೊಳಿಸಲು ನಿರ್ಧರಿಸಲಾಗಿದೆ. ರು. 2,516 ಕೋಟಿ ಅನುದಾನದಲ್ಲಿ ಕೇಂದ್ರ ಪಾಲು ರು.1,528 ಕೋಟಿ ಇರಲಿದೆ. ಯೋಜನೆಯಿಂದ ಸುಮಾರು 13 ಕೋಟಿ ರೈತರಿಗೆ ನೆರವಾಗಲಿದೆ ಎಂದು ಕೇಂದ್ರದ ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವ ಅನುರಾಗ್ ಠಾಕೂರ್ ತಿಳಿಸಿದ್ದಾರೆ.

30-06-2022 Vsv Pg 08

30-06-2022 Sk Pg 09

10 ಸಾವಿರ ರೈತರಿಗೆ ಸೋಲಾರ್ ಪಂಪ್‌ಸೆಟ್

ಸಂ.ಕ.ಸಮಾಚಾರ, ಬೆಂಗಳೂರು

ಕುಸುಮ್-ಬಿ ಯೋಜನೆಯಡಿ ರಾಜ್ಯದಾದ್ಯಂತ 10 ಸಾವಿರ ರೈತರಿಗೆ ರಿಯಾಯಿತಿ ದರದಲ್ಲಿ ಸೋಲಾರ್ ಪಂಪ್‌ಸೆಟ್‌ಗಳನ್ನು ವಿತರಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ ಎಂದು ಇಂಧನ ಸಚಿವ ವಿ. ಸುನೀಲ್ ಕುಮಾರ್ ಹೇಳಿದ್ದಾರೆ.



ಕುಸುಮ್-ಬಿ ಯೋಜನೆಯಡಿ ಈ ಸೋಲಾರ್ ಪಂಪ್ ಸೆಟ್?ಗಳನ್ನು ಒದಗಿಸಲು ನಿರ್ಧರಿಸಲಾಗಿದೆ. ಈ ಯೋಜನೆಗೆ ರೈತರೇ ಅರ್ಜಿ ಹಾಕಿಕೊಳ್ಳಬೇಕು. ಪ್ರತಿ ಸೋಲಾರ್ ಪಂಪ್‌ಸೆಟ್‌ಗೆ ವೆಚ್ಚವಾಗುವ ಹಣದಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ತಲಾ 30 ರಷ್ಟು ಪ್ರಮಾಣದ ಹಣ ಒದಗಿಸಲಿದ್ದು, ಫಲಾನುಭವಿ ರೈತರು ಶೇ.40 ರಷ್ಟು ಹಣ ಪಾವತಿಸಬೇಕು ಎಂದು ಇಂಧನ ಸಚಿವ ವಿ. ಸುನೀಲ್ ಕುಮಾರ್ ತಿಳಿಸಿದ್ದಾರೆ.

ರಾಜ್ಯದಲ್ಲಿ ಹೊಸದಾಗಿ ಎಂಟು ಲಕ್ಷ ಮಂದಿ ವಿದ್ಯುತ್ ಪಂಪ್ ಸೆಟ್?ಗಳಿಗೆ ಅರ್ಜಿ ಹಾಕಿದ್ದಾರೆ. ಇಂತಹ ರೈತರು ಕಾಯುವ ಬದಲು ಸೋಲಾರ್ ಪಂಪ್ ಸೆಟ್ ಗಳನ್ನು ಅಳವಡಿಸಿ ಕೊಳ್ಳಬಹುದು.

ಹೀಗೆ ಸೋಲಾರ್ ಪಂಪ್‌ಸೆಟ್ ಅಳವಡಿಸಿ ಕೊಂಡರೆ ರೈತರಿಗೂ ಅನುಕೂಲವಾಗಲಿದೆ. ಈ ಯೋಜನೆಯಡಿ ಪ್ರಸಕ್ತ ವರ್ಷ 10 ಸಾವಿರ ಮಂದಿ ರೈತರಿಗೆ ಏಳು ಅಶ್ವಶಕ್ತಿ ವರೆಗಿನ ಸೋಲಾರ್ ಪಂಪ್ ಸೆಟ್‌ಗಳನ್ನು ಒದಗಿಸಲಾಗುವುದು ಎಂದರು.

ರಾಜ್ಯದಲ್ಲಿ ಈಗ 34 ಲಕ್ಷ ಕೃಷಿ ಪಂಪ್ ಸೆಟ್‌ಗಳಿದ್ದು, ಇನ್ನೂ ಎಂಟು ಲಕ್ಷ ಮಂದಿ ಸಂಪರ್ಕಕ್ಕಾಗಿ ಅರ್ಜಿ ಸಲ್ಲಿಸಿದ್ದಾರೆ. ಕೃಷಿ ಪಂಪ್ ಸೆಟ್, ಭಾಗ್ಯಜ್ಯೋತಿ ಯೋಜನೆ ಸೇರಿದಂತೆ ಕೆಲ ಯೋಜನೆಗಳಿಗಾಗಿ ಸರ್ಕಾರ ಹದಿನೈದು ಸಾವಿರ ಕೋಟಿ ರೂಪಾಯಿ ಅನುದಾನದ ರೂಪದಲ್ಲಿ ನೀಡುತ್ತಿದೆ. ರಾಜ್ಯದಲ್ಲಿ ವಿದ್ಯುತ್ ಬೇಡಿಕೆಯ ಪ್ರಮಾಣ ಎಂಟು ಸಾವಿರ ಮೆಗಾವ್ಯಾಟ್ ನಷ್ಟಿದೆ ಎಂದು ಮಾಹಿತಿ ನೀಡಿದರು.

ಈ ಹಿಂದೆ ವಿದ್ಯುತ್ ಕೊರತೆಯಾದಾಗ ಹೊರರಾಜ್ಯಗಳಿಂದ ವಿದ್ಯುತ್ ಖರೀದಿಸುವ ಕೆಲಸ ನಡೆಯುತ್ತಿತ್ತು. ಆದರೆ ಈಗ ಖಾಸಗಿಯವರಿಗೆ ಮತ್ತು ಹೊರರಾಜ್ಯಗಳಿಗೆ ವಿದ್ಯುತ್ ಮಾರಾಟ ಮಾಡುವ ಸುಸ್ಥಿತಿಯಲ್ಲಿದ್ದೇವೆ. ಕಲ್ಲಿದ್ದಲಿನ ಕೊರತೆ ಇಲ್ಲ: ರಾಜ್ಯದ ವಿದ್ಯುತ್ ಘಟಕಗಳಿಗೆ ಸದ್ಯಕ್ಕೆ ಕಲ್ಲಿದ್ದಲಿನ ಕೊರತೆ ಇಲ್ಲ. ಈಗಾಗಲೇ ಮೂರು ಕೇಂದ್ರಗಳಿಂದ ರಾಜ್ಯಕ್ಕೆ 13 ರೇಕುಗಳಷ್ಟು ಕಲ್ಲಿದ್ದಲನ್ನು ಕೇಂದ್ರ ಸರ್ಕಾರ ಮಂಜೂರು ಮಾಡಿದೆ.

ರಾಜ್ಯದಲ್ಲಿ ವಿದ್ಯುತ್ ಚಾಲಿತ ವಾಹನಗಳಿಗೆ ಉತ್ತೇಜನ ನೀಡುವ ದೃಷ್ಟಿಯಿಂದ ಎಲ್ಲೆಡೆ ವಿದ್ಯುತ್ ರಿಚಾರ್ಜಿಂಗ್ ಕೇಂದ್ರಗಳನ್ನು ತೆರೆಯಲು ಸರ್ಕಾರ ನಿರ್ಧರಿಸಿದೆ. ಜುಲೈ 1 ರಿಂದ ಆರಂಭವಾಗುವ ಇ.ವಿ. ಅಭಿಯಾನದಡಿ 1108 ವಿದ್ಯುತ್ ರಿಚಾರ್ಜ್ ಕೇಂದ್ರಗಳನ್ನು ಪ್ರಾರಂಭಿಸಲಾಗುವುದು ಎಂದು ಅವರು ತಿಳಿಸಿದರು.

ರಾಜ್ಯಗಳ ಕೃಷಿ ಸಚಿವರ ಸಭೆ

ಬೆಂಗಳೂರಿನಲ್ಲಿ 14, 15ಕ್ಕೆ ಸಮಾವೇಶ ಆಯೋಜನೆ

ಬೆಂಗಳೂರು: ರಾಜ್ಯ ರಾಜಧಾನಿ ಬೆಂಗಳೂರಿನಲ್ಲಿ ಇದೇ ಮೊದಲ ಬಾರಿಗೆ ಕೇಂದ್ರ ಸರಕಾರ ದೇಶದ ಎಲ್ಲ ರಾಜ್ಯಗಳ ಕೃಷಿ ಸಚಿವರ ಸಭೆಯನ್ನು ಆಯೋಜಿಸಿದೆ.

ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಸಚಿವಾಲಯದ ವತಿಯಿಂದ ಜುಲೈ 14 ಮತ್ತು 15ಕ್ಕೆ ಬೆಂಗಳೂರಿನಲ್ಲಿ ದೇಶದ ಎಲ್ಲ ರಾಜ್ಯಗಳ ಕೃಷಿ ಸಚಿವರ ಸಭೆ ನಡೆಯಲಿದೆ. ಕೇಂದ್ರ ಕೃಷಿ ಸಚಿವರಾದ ನರೇಂದ್ರ ಸಿಂಗ್ ತೋಮರ್ ಮತ್ತು ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಸಭೆಯ ನೇತೃತ್ವ ವಹಿಸಲಿದ್ದಾರೆ. ಈ ಕುರಿತು ಕೇಂದ್ರದಿಂದ ಈಗಾಗಲೇ ರಾಜ್ಯಕ್ಕೆ ಮಾಹಿತಿ ನೀಡಲಾಗಿದೆ.

ಸಭೆಯಲ್ಲಿ ಕೃಷಿ ಸಚಿವರು ದೇಶದ ಕೃಷಿ ಕುರಿತು ಎರಡು ದಿನ ಸರಣಿ ಸಭೆಗಳನ್ನು ನಡೆಸಲಿದ್ದಾರೆ. ದೇಶದ ರೈತರ ಆದಾಯ ಹೆಚ್ಚಳ, ಕೃಷಿ ಉತ್ಪಾದನೆ ವೆಚ್ಚ ತಗ್ಗಿಸುವುದು, ಕೃಷಿ ಸಂಬಂಧಿ ಉಪಕ್ರಮಗಳ ವಿನಿಮಯ ವಿಷಯವಾಗಿ ಈ ಸಭೆ ಹೆಚ್ಚು ಮಹತ್ವ ಪಡೆದುಕೊಂಡಿದೆ.

ಸಭೆಯನ್ನು ಮೊದಲು ಕರ್ನಾಟಕ ಇಲ್ಲವೇ ರಾಜ ಸ್ಥಾನದಲ್ಲಿ ನಡೆಸುವ ಕುರಿತು ಚರ್ಚೆಗಳಾಗಿ ದ್ದವು. ಕೊನೆಗೆ ಕೇಂದ್ರ ಕೃಷಿ ಸಚಿವಾಲಯ ಕರ್ನಾಟಕವನ್ನು ಆಯ್ಕೆ ಮಾಡಿಕೊಂಡಿದೆ. ಈ ಮೂಲಕ ಕೃಷಿ ಕ್ಷೇತ್ರದ ಅಭಿವೃದ್ಧಿ ಬಗೆಗಿನ ಬೃಹತ್ ಸಭೆಗೆ ರಾಜಧಾನಿ ಸಾಕ್ಷಿಯಾಗಲಿದೆ ಎಂದು ರಾಜ್ಯದ ಕೃಷಿ ಸಚಿವ ಬಿಸಿ.ಪಾಟೀಲ್ ಸಂತಸ ವ್ಯಕ್ತಪಡಿಸಿದ್ದಾರೆ.



ಕೃಷಿ, ಕೃಷಿಕರಿಗೆ ಆದ್ಯತೆ ನೀಡಿರುವ ರಾಜ್ಯ ಸರ್ಕಾರ ಈಗಾಗಲೇ ರೈತರ ಮಕ್ಕಳ ಶಿಕ್ಷಣ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ವಿದ್ಯಾನಿಧಿ ಯೋಜನೆ ಸೇರಿದಂತೆ ಹಲವು ವಿನೂತನ ಕಾರ್ಯಕ್ರಮಗಳು ಜಾರಿಗೊಳಿಸಿದೆ. ರಾಜ್ಯದ ರೈತರ ಆದಾಯ ದ್ವಿಗುಣಗೊಳಿಸುವತ್ತಲೂ ರಾಜ್ಯ ದೃಷ್ಟಿ ಹರಿಸಿದೆ. ರಾಜ್ಯದಲ್ಲಿ ಈಗಾಗಲೇ ರೈತರ ಆದಾಯ ಹೆಚ್ಚಿಸುವ ಸಂಬಂಧ ನಿರ್ದೇಶನಾಲಯ ಸ್ಥಾಪಿಸಲಾಗಿದೆ. ಎಲ್ಲ ರಾಜ್ಯಗಳ ಸಚಿವರು ವಿಚಾರ ವಿನಿಮಯ ಮಾಡಿಕೊಳ್ಳಲು ಕೃಷಿ ಸಚಿವರುಗಳ ಸಭೆ ಉತ್ತಮ ವೇದಿಕೆ ಆಗಲಿದೆ.

-ಬಿ. ಸಿ. ಪಾಟೀಲ್ ರಾಜ್ಯದ ಕೃಷಿ ಸಚಿವ

30-06-2022 Vsv Pg 08

For more information visit
University Library Website
Web - uasbagrilibindia.org
E-mail- librarian@uasbangalore.edu.in